ಕಾಲಕ್ಕೆ ದೇವರೂ ದಿಕ್ಕು ಕಾಣದವನಂತಾಗುತ್ತಾನೆ ಅಂದುಕೊಳ್ಳಿ. ಅಂಥಾ ಸಮಯಕೆಟ್ಟ ದೇವರ ಪುರಾಣಗಳು ಅದೆಷ್ಟು ಇವೆ ಗೊತ್ತಾ. ಇಲ್ಲಾ ದೇವರೇ ಗುಡಿಯ ಘಾಸಲೆ ಬಿಟ್ಟು ಯಾತ್ರೆ ಹೋದ ಸಂದರ್ಭದಲ್ಲೂ ಇಂಥಾ ಕಳ್ಳ ವ್ಯವಹಾರಗಳಾಗುತ್ತವೆ. ದೇವರು ನಿಜ ಸ್ಥಾನದಲ್ಲಿದ್ದರೆ ನೀಚ ಕೃತ್ಯಗಳು ನಡೆಯುವುದುಂಟಾ" ಎಂದು ನಂಬಿಸಿ ಬಿಟ್ಟ,' ಅನ್ನುವಲ್ಲಿ ಗೋವಿಂದನ ನಗುವಿಗೆ ಶೀನಿಯೂ ತನ್ನ ಬಾರಿ ನಗುವನ್ನು ಬೆರೆಸಿದ.

'ರಾಜಿ ಮದುವೆಯಾದಾಗ ಅವಳು ಮೂಲಾ ನಕ್ಷತ್ರವಾದರೂ ಚಂದದಿಂದಲೇ ಅಳಿಯ ತಿರುಮಲನೊಡನೆ ಸಂಸಾರ ಮಾಡುವವಳಾಗುತ್ತಾಳೆ, ಮಾವನಿಗೆ ಪ್ರಾಣ ಕಂಟಕ ಆಗದೇ ಇರುವ ಹಾಗೆ ಆಂಜನೇಯನ ಸಮ್ಮುಖದ ವಪ್ಪಾರೆಯಲ್ಲಿ ನಿತ್ಯ ಅವನ ಆಶೀರ್ವಾದದ ಮೇಲಿರಲಿ ಎಂದನಲ್ಲ. ಇವಳ ನಕ್ಷತ್ರದಿಂದ ಕಂಟಕವಾಗೋದು ಬಿಡು, ಆ ತಿರುಮಲಪುರುಷ ಉಡುಪಿಯಲ್ಲೋ, ಮಂಗಳೂರಲ್ಲೋ ಅಡಿಗೆ ಕೆಲಸಕ್ಕೆ ಕರೆಯುತ್ತಿದ್ದಾರೆ ಅಂತ ಹೋದವನು ಇತ್ತ ಮುಖವನ್ನೇ ಹಾಕಲಿಲ್ಲ. ರಾಜಿ ಗುಡಿಯ ಮುಂದಿನ ಕಂಬದಂತೆ ಒಬ್ಬಳೇ ಆದಳು. ಇನ್ನು ಅವಳನ್ನು ಅಪ್ಪನ ಮುಂದೆ ನಿಲ್ಲಿಸುವುದುಂಟೆ ಅಂತ ನನಗೆ ಅನ್ನಿಸತೊಡಗಿತು. ಅವಳ ಮುಂದಿನ ದಿನಗಳನ್ನು ಪಂಚಾಂಗದ ಹಾಳೆ ನೋಡಿ ಅದೇನಂತ ತೀರ್ಮಾನಿಸುತ್ತಿದ್ದನೋ? ಈ ಮಾತಿಲ್ಲದವಳ ಗತಿ ಅಪ್ಪನ ಸಮ್ಮುಖದಲ್ಲಿ, ಗುಡಿಯ ಮುಂದಿನ ಖಾಲಿ ವಪ್ಪಾರೆಯಲ್ಲಿ ಸಾಗುವುದು ಬೇಡ ಅನಿಸಿತು. ಜೊತೆಗೆ ಅವಳ ಮುಂದಯೇ ತಪ್ಪು ಕಾರ್ಯ ಮಾಡಿದೆ ಅನ್ನುವುದು ನನಗೂ ಉಳಿದು ಬಿಟ್ಟಿತ್ತಲ್ಲಾ. ಅಥವಾ ನಾನು ಕಟ್ಟಿಕೊಂಡ ಹೆಂಡತಿಯ ಜತೆಗಿರಲಿ ಅಂತ ಕರೆದುಕೊಂಡು ಬಂದುಬಿಟ್ಟೆನೋ ಹೇಗೋ,' ಎಂದು ರಾಜಿಯನ್ನು ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದರ ಹಿಂದಿನ ಮರ್ಮದ ಬಗ್ಗೆ ಶೀನಿ ಆಲೋಚಿಸುತ್ತಾ, ನಂತರ ಮುಂದುವರಿಸಿದ...

'ಈ ಅರಮನೆಯಲ್ಲಿ, ಮಾತು ಬಾರದ ಅವಳ ಮನೋ ಲೋಕದಲ್ಲಿ, ನನಗೆ ಹುಟ್ಟಿದ ಇಬ್ಬರು ಮಕ್ಕಳೊಡನೆ ನನ್ನ ಹೆಂಡತಿ ಯಾವ ಜಾತಿಯವಳು ಎಂದು ಗೊತ್ತೇ ಇಲ್ಲವೆಂಬಂತೆ ಚೆನ್ನಾಗಿದ್ದಾಳೆ, ನನಗೆ ಅಷ್ಟು ಸಾಕು. ಒಂದು ವೇಳೆ ಇವಳೂ ಅಪ್ಪನ ಆಜ್ಞೆಯಂತೆ ಗುಡಿಯ ಮುಂದೆ ಒಂಟಿಯಾಗಿ ಎಳ್ಳು ಗಂಟು ಹಚ್ಚಲು ಬರುವವರಿಗೆಲ್ಲ ಅನುವು ಮಾಡಿಕೊಡುತ್ತಲೇ ಒಂದಲ್ಲ ಒಂದು ದಿನ ಆ ಬೆಂಕಿ ಕುಂಡಕ್ಕೆ ತಲೆ ಕೊಡುವುದರಲ್ಲಿ ಅನುಮಾನವಿರಲಿಲ್ಲ ಎನಿಸುತ್ತದೆ' ಎಂದ ಶೀನಿ.

ಗೋವಿಂದಾಚಾರ್ಯ, 'ಆ ಮಾತೆಲ್ಲಾ ಬೇಡ ಬಿಡು' ಅನ್ನುವ ಹೊತ್ತಿಗೆ ರಾಜಿ ಮಕ್ಕಳೊಡನೆ ಕೈಯಲ್ಲಿ ಹಿಡಿದ ಚೀಲದೊಡನೆ ಹೊಸ್ತಿಲು ದಾಟಿ ಒಳಬಂದವಳಿಗೆ ಅಣ್ಣನನ್ನು ಕಂಡದ್ದೇ ಮಾತುಬಾರದ ಬಾಯಲ್ಲಿ ಆಡಲಾಗದ ಭಾವವು ಎದೆಯಲ್ಲ ತುಂಬಿ ಬಂದುಬಿಟ್ಟಿತು.

★★★

ಗೋವಿಂದನು ಯಾತ್ರೆಯ ನಿಮಿತ್ತ ಊರು ಬಿಟ್ಟು ವಾರ ಕಳೆದಿರುವುದಾಗಿ, ಮನೆಯತ್ತ ಪ್ರಯಾಣವಾಗಬೇಕೆನಿಸಿ 'ಶೀನಿ, ಆಗಲೇ ಹೇಳಿದೆನಲ್ಲ, ಊರಕಡೆ ಬಾ. ನೀನು ಈ ಸಿಟಿ ಸೇರಿ ಇಪ್ಪತ್ತು ವರ್ಷ ಆಗೇಹೋಯಿತು, ರಾಜಿಯೂ ನಿನ್ನರಮನೆ ಸೇರಿದ ಮೇಲೆ ಅತ್ತ ಸುಳಿದಿಲ್ಲ. ಯಾವಾಗಲೂ ಕಾಲದ ಹೆಜ್ಜೆ ಮುಂದೆ ಮುಂದೆಯೆ! ನಾನಿನ್ನು ಬರಲೇ,' ಎಂದ. ಅನ್ಯ ಜಾತಿಯವಳನ್ನು ಲಗ್ನವಾಗಿರುವುದರಿಂದೇನಾದರೂ ಗೋವಿಂದ ಮನೆಯಲ್ಲಿ ಉಳಿದುಕೊಳ್ಳಲು ಹಿಂದೇಟು ಹಾಕುತ್ತಿರಬಹುದೇ ಎಂದುಕೊಂಡ ಶ್ರೀನಿವಾಸ ಹುಳ್ಳಹುಳ್ಳಗೆಂಬಂತೆ 'ನಾನು ಊರು ಬಿಟ್ಟಿರಬಹುದು, ಬೇರೆಯವಳನ್ನು ಲಗ್ನವಾಗಿರಬಹುದು, ಆದರೆ ನೆನಪಿರುವಷ್ಟು ಆಚಾರ, ಮಡಿ ಮಾಡುತ್ತೇನೆ ಕಣಯ್ಯ,' ಎಂದ.